25

# “ನಾವು ಕ್ರಿಸ್ತನನ್ನು ಪ್ರಸಂಗಿಸುತ್ತೇವೆ’’

“ನಮ್ಮನ್ನೇ ಪ್ರಸಿದ್ಧಿಪಡಿಸಿಕೊಳ್ಳದೆ, ನಮ್ಮನ್ನು ಯೇಸುವಿನ ನಿಮಿತ್ತ ನಿಮ್ಮ ದಾಸರೆಂತಲೂ ಕ್ರಿಸ್ತೇಸುವನ್ನೆ ಕರ್ತನೆಂತಲೂ ಪ್ರಸಿದ್ಧಿಪಡಿಸುತ್ತೇವೆ’’ ಎಂಬ ಹೇಳಿಕೆ ಯನ್ನು 2 ಕೊರಿಂಥ 4:5ರಲ್ಲಿ ಕೊಟ್ಟಾಗ ಪೌಲನು ಅಪೊಸ್ತಲಿಕ ಪ್ರಸಂಗಿಸುವಿಕೆಯ ಮುಖ್ಯ ಪ್ರಸ್ತಾಪವನ್ನು ನಮಗೆ ಪ್ರಕಟಿಸಿದನು.

ಹೊಸ ಒಡಂಬಡಿಕೆಯ ಅನೇಕ ವಾಕ್ಯಗಳಲ್ಲಿ ಈ ಸಂಗತಿಯು ಸ್ಪಷ್ಟವಾಗಿರುತ್ತದೆ. ಪಂಚಾಶತ್ತಮ ದಿನದಂದು ಪೇತ್ರನ ಪ್ರಸಂಗದ ಮುಖ್ಯ ಪ್ರಸ್ತಾಪವು ಕ್ರಿಸ್ತನು (ಅಪೊಸ್ತಲರ ಕೃತ್ಯ 2:36 ನೋಡಿರಿ). ಅಪೊಸ್ತಲರ ಕೃತ್ಯ 8ರಲ್ಲಿಯ ಎರಡು ಮಾರ್ಪಡುವಿಕೆಗಳಲ್ಲಿ ಫಿಲಿಪ್ಪನು ಮುಖ್ಯ ಪ್ರಸ್ತಾಪ ಕ್ರಿಸ್ತನು ಆಗಿದ್ದನು (5, 35 ವಚನಗಳನ್ನು ನೋಡಿರಿ). ಅಪೊಸ್ತಲಿಕ ಪ್ರಸಂಗಿಸುವಿಕೆಯು ಅದರ ವ್ಯಾಪ್ತಿಯಲ್ಲಿ ಜಾಗತಿಕವಾದದ್ದೂ ಅದರ ಪರಿಣಾಮದಲ್ಲಿ ಕ್ರಾಂತಿಕಾರಕವಾದದ್ದೂ ಆಗಿತ್ತು. ಅಪೊಸ್ತಲರ ವೈರಿಗಳೂ ಸಹ ಅವರು ಜಗತ್ತನ್ನು ಅಲ್ಲಕಲ್ಲೋಲಗೊಳಿಸಿದ್ದಾರೆ ಎಂದು ಹೇಳಿದರು. ಪೌಲನು ಜೀವಿಸಿದಾಗ ತಾನೇ ಎರಡು ಖಂಡಗಳನ್ನು ಹಾಗೂ ತನ್ನ ಮರಣದ ನಂತರ ಇತರ ಅನೇಕವುಗಳನ್ನು ನಡುಗಿಸಿದನು.

ಕೆಲವೇ ಜನರು ರೋಮನ್ ಜಗತ್ತನ್ನು ಜಯಿಸಿದರು. ಅವರು ಅದನ್ನು ಹೇಗೆ ಮಾಡಿದರು? ಅವರು ತಮ್ಮ ಸ್ವಂತ ಮಾತುಗಳಲ್ಲಿ ಉತ್ತರ ಕೊಟ್ಟರು. “ನಾವು ಕ್ರಿಸ್ತನನ್ನು ಪ್ರಸಂಗಿಸುತ್ತೇವೆ’’ ಎಂದರು ಆದರೆ “ನಾವು ಕ್ರಿಸ್ತನ ಬಗ್ಗೆ ಪ್ರಸಂಗಿಸುತ್ತೇವೆ’’ ಎಂದು ಅವರು ಹೇಳಲಿಲ್ಲ. ಕ್ರಿಸ್ತನನ್ನು ಪ್ರಸಂಗಿಸುವಾಗ ಅಪೊಸ್ತಲರು ಏನನ್ನು ಪ್ರಸಂಗಿಸಿದರು?

## ಆತನ ದೇವತ್ವ

ಯೇಸು ದೇವರಾಗಿರುವದನ್ನು ಹೇಳಿದನು (ಯೋಹಾನ 19:7; ಮಾರ್ಕ 14:61, 62; ಇವುಗಳನೂ ನೋಡಿರಿ: ಯೋಹಾನ 10:32-38; 14:8-11). “ಈತನು ನನ್ನ ಪ್ರಿಯ ಕುಮಾರನು’’ ಎಂದು ಯೇಸುವನ್ನು ಕರೆಯುವದರಿಂದ ತಂದೆಯಾದ ದೇವರು ಆತನಿಗೆ ದೈವತ್ವವನ್ನು ಸಂಬಂಧಿಸಿದನು (ಮತ್ತಾಯ 3:17; 17:5) ಎಲ್ಲಾ ಪುರುಷರು ದೇವರ ಮಕ್ಕಳು ಎಂದು ಆಧುನಿಕನು ಹೇಳಬಹುದು. ಆದರೆ ಯೇಸುವು ಕುಮಾರನಾಗಿರುವ ರೀತಿಯಲ್ಲಿ ಯಾವುದೇ ಮಾನವನು ಮಗನಾಗಿರುವದಿಲ್ಲ. ಆತನು ದೇವರ “ಒಬ್ಬನೇ’’ ಕುಮಾರನಾಗಿದ್ದಾನೆ (ಯೋಹಾನ 3:16). ಇಬ್ರಿಯ 1:8-10ರಲ್ಲಿ ದೇವರು ಕುಮಾರನನ್ನು ಸಂಬೋಧಿಸಿ ಆತನನ್ನು “ದೇವರು’’ ಎಂದು ಕರೆದನು ಎಂದು ಹೇಳಲ್ಪಟ್ಟಿದೆ.

ದೈವತ್ವದ ತಿಳಿದ ಪ್ರತಿಯೊಂದು ಗುಣಲಕ್ಷಣವು ಯೇಸುವು ಭೂಲೋಕದಲ್ಲಿದ್ದಾಗ ಆತನಲ್ಲಿ ಪ್ರಕಟವಾದವು. ಆತನು ನ್ಯಾಯವನ್ನು, ಪವಿತ್ರತೆಯನ್ನು, ಕರುಣೆಯನ್ನು, ಪ್ರೀತಿಯನ್ನು ಕ್ಷಮಿಸುವ ಬಲವನ್ನು ಪ್ರಕಟಿಸಿದನು. ತನ್ನ ದೈವತ್ವದ ಸಂಗತಿಯನ್ನು

ಸ್ಥಾಪಿಸಲು ಆತನು ಅದ್ಭುತಗಳನ್ನು ಮಾಡಿದನು (ಯೋಹಾನ 20:30, 31). ಪ್ರಥಮ ಶತಮಾನದ ಪ್ರಸಂಗಿಸುವಿಕೆಯಲ್ಲಿ ನಾವು ಸ್ವಾಭಾವಿಕವಾಗಿ ಕ್ರಿಸ್ತನ ದೇವತ್ವವನ್ನು ನಿರೀಕ್ಷಿಸುತ್ತೇವೆ ಮತ್ತು ಅದು ಹಾಗೆ ಇತ್ತು. ಉದಾಹರಣೆಗಾಗಿ, ಅಪೊಸ್ತಲರ ಕೃತ್ಯ 2ರಲ್ಲಿ, ಪ್ರಥಮ ಸುವಾರ್ತಾ ಪ್ರಸಂಗದಲ್ಲಿ ಅದ್ಭುತ ಮಾಡಿದ ಕ್ರಿಸ್ತನಲ್ಲಿಡಲ್ಪಟ್ಟದ್ದನ್ನು ಗಮನಿಸಿರಿ.

ಯೇಸುವಿನ ದೇವತ್ವವನ್ನು ಪ್ರಸಂಗಿಸುವುದು ಆತನ ಮಾನವತ್ವವನ್ನು ಅಲ್ಲಗಳೆಯುವದಾಗಿರುವದಿಲ್ಲ. ಆತನು ಮಾನವನು, ದೇವರೂ ಎರಡೂ ಆಗಿದ್ದನು. ಆತನು "ಮನುಷ್ಯಕುಮಾರನು" ಮತ್ತು "ದೇವರ ಕುಮಾರನು." ಆತನು "ಶರೀರಧಾರಿಯಾಗಿ ಪ್ರತ್ಯಕ್ಷನಾದ" ದೇವರು ಆಗಿದ್ದನು (1 ತಿಮೊಥೆ 3:16). ಆತನು "ಆಕಾರದಲ್ಲಿ ಮನುಷ್ಯನಾಗಿ" ಕಾಣಿಸಿಕೊಂಡನು (ಫಿಲಿಪ್ಪಿ 2:7).

## ಆತನ ಪೂರ್ವ ಅಸ್ತಿತ್ವ

ಯೇಸುವಿನ ದೇವತ್ವವನ್ನು ಸ್ಥಾಪಿಸಿದ ನಂತರ ಅನ್ವಯದಿಂದ ಸ್ಥಾಪಿಸಲ್ಪಟ್ಟ ಇತರ ಸಿದ್ಧಾಂತಗಳ ಕಡೆಗೆ ನೋಡೋಣ. ಪ್ರಾರಂಭದಲ್ಲಿ, ಆತನ ಪೂರ್ವ ಅಸ್ತಿತ್ವವನ್ನು ಯೋಚಿಸ ಬೇಕು. "ಅಬ್ರಹಾಮನು ಹುಟ್ಟುವದಕ್ಕಿಂತ ಮೊದಲು ನಾನು ಇದ್ದೇನು" (ಯೋಹಾನ 8:58) ಎಂದು ಹೇಳಿ ಯೇಸು ಈ ಭಾವನೆಯನ್ನು ಬೋಧಿಸಿದನು. ಯೋಹಾನ 17:5ರಲ್ಲಿ ಆತನು ಪ್ರಾರ್ಥಿಸಿದಂತೆ, "ಈಗ ತಂದೆಯೇ ನೀನು ನಿನ್ನ ಬಳಿಯಲ್ಲಿ ನನ್ನನ್ನು ಮಹಿಮೆ ಪಡಿಸು; ಲೋಕ ಉಂಟಾಗುವದಕ್ಕಿಂತ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆ ಪಡಿಸು" ಎಂದು ಹೇಳಿದನು. ಯೇಸು ಈ ಸತ್ಯವನ್ನು ಒತ್ತಿ ಹೇಳಿದ್ದರಿಂದ ಇದನ್ನು ಆತನ ಹಿಂಬಾಲಕರ ಬರಹಗಳಲ್ಲಿ ಕಂಡುಕೊಳ್ಳುವದರಲ್ಲಿ ಆಶ್ಚರ್ಯ ಬರಿತರಾಗುವದಿಲ್ಲ. ಓದಿರಿ ಯೋಹಾನ 1:1-4; 1 ಯೋಹಾನ 1:1, 2; ಕೊಲೊಸ್ಸೆ 1:15-18; ಪ್ರಕಟನೆ 1:8.

## ಆತನ ನರಾವತಾರ

ಯೇಸು ಭೂಲೋಕಕ್ಕೆ ಬರುವದಕ್ಕಿಂತ ಮೊದಲು ಅಸ್ತಿತ್ವದಲ್ಲಿದ್ದರೆ, ಆಗ ಆತನ ಬರೋಣವು ಆತನ ಮೂಲವಾಗಿರಲಿಲ್ಲ. ಆದರೆ ಆತನ ನರಾವತಾರವಾಗಿತ್ತು. ನರಾವತಾರದ ಬಗ್ಗೆ ನಾವು ಯೋಹಾನ 1:14 ಮತ್ತು ಫಿಲಿಪ್ಪಿ 2:5-8ರಲ್ಲಿ ಓದುತ್ತೇವೆ.

ಯೇಸುವಿನ ಜನನವು ಕನ್ನಿಕೆಯಲ್ಲಿ ಜನಿಸಿಬರುವುದಾಗಿದೆಯೆಂದು ಯೆಶಾಯ ಪ್ರವಾದಿಯ ಹೇಳಿದ ಪ್ರವಾದನೆಯು ನೆರವೇರಿತೆಂದು ಮತ್ತಾಯನು ಹೇಳಿದ್ದಾನೆ (ಮತ್ತಾಯ 1:22, 23). ಯೇಸುವಿನ ಜನನದ ವಿಧಾನವು ಅಪೂರ್ವವಾದದ್ದೂ ಸರಿಸಮಾನತೆಯಿಲ್ಲದ್ದೂ ಆಗಿತ್ತು. ಇದು ನಮ್ಮ ಗ್ರಹಿಕೆಯನ್ನು ಮೀರಿದ್ದಾಗಿದೆ. ನೈಸರ್ಗಿಕ ವಿವರಣೆಯಲ್ಲಿ ಹೊಂದಿಕೊಳ್ಳಲಾರದ್ದನ್ನು ತೆಗೆದು ಹಾಕಲು ಅನೇಕ ಬೈಬಲ್ ಪಂಡಿತರು ಬಯಸುತ್ತಾರೆ. ಯೇಸುವನ್ನು ಪ್ರಸಂಗಿಸುವುದು ಆತನ ನರಾವತಾರವನ್ನು ಪ್ರಸಂಗಿಸುವುದಾಗಿದೆ; ಆತನ ನರಾವತಾರದ ವಿಧಾನವು ಕನ್ಯೆಯಿಂದ ಜನಿಸುವುದಾಗಿತ್ತು. ಕನ್ಯೆಯಿಂದಾದ ಜನನವನ್ನು ಯಾರೂ ಅಲ್ಲಗಳೆಯಲಾರರು ಮತ್ತು ಹೊಸ ಒಡಂಬಡಿಕೆಯ ಕ್ರಿಸ್ತನನ್ನು ಇನ್ನೂ ಪ್ರಸಂಗಿಸುತ್ತಿರುವರು.

## ಆತನು ಶಿಲುಬೆಗೆ ಹಾಕಲ್ಪಟ್ಟದ್ದು

ತಾನು ಸಾಯುವೆನೆಂದು ಕ್ರಿಸ್ತನು ಹೇಳಿದನು (ಯೋಹಾನ 10:15). "ಶಿಲುಬೆಗೆ ಹಾಕಲ್ಪಟ್ಟ ಕ್ರಿಸ್ತನನ್ನು" ಪೌಲನು ಪ್ರಸಂಗಿಸಿದನು (1 ಕೊರಿಂಥ 1:23). ಹಾಗೂ "ಕ್ರಿಸ್ತನು ನಮ್ಮ ಪಾಪಗಳಿಗಾಗಿ ಮರಣ ಹೊಂದಿದನು" (1 ಕೊರಿಂಥ 15:3) ಎಂಬುದನ್ನು ಸ್ಪಷ್ಟಪಡಿಸಿದನು. "ರಕ್ತಧಾರೆಯಿಲ್ಲದೇ ಕ್ಷಮಾಪಣೆಯಿಲ್ಲ" (ಇಬ್ರಿಯ 9:22) ಎಂದು ನಮಗೆ ಹೇಳಲ್ಪಟ್ಟಿದೆ. ರಕ್ತ ಹಾಗೂ ಪಾಪ ಪರಿಹಾರದ ಬಲಿಯು ಯಾವುದೇ ಹೇಳಿಕೆಯನ್ನು ಅನೇಕರು ತಮ್ಮ ಪ್ರಸಂಗಿಸುವಿಕೆಯಿಂದ ತೆಗೆದು ಹಾಕಿದ್ದಾರೆ. ಕ್ರಿಸ್ತನ ಮರಣವು ನಮ್ಮ ಪಾಪಗಳಿಗಾಗಿ ಇರುವದನ್ನು ಕಡೆಗಣಿಸಿದರೆ ಕ್ರಿಸ್ತನು ಪ್ರಸಂಗಿಸಲ್ಪಡಲಾರನು.

## ಆತನ ಪುನರುತ್ಥಾನ

ಬೇರೆ ಇತರ ಅನೇಕವುಗಳಿಗಿಂತ ಹೆಚ್ಚಾಗಿ ಪುನರುತ್ಥಾನದ ಸತ್ಯವು ಆದಿ ಸಭೆಯ ಯಶಸ್ಸಿಗೆ ಕಾರಣವಾಗಿದೆ. ಕ್ರಿಸ್ತನು ತಾನು ಎದ್ದು ಬರುವೆನೆಂದು ಹೇಳಿದನು (ಯೋಹಾನ 2:19-21). ಅನಂತರದಲ್ಲಿ ಆತನು ತಾನು ಎದ್ದಿದ್ದೇನೆಂದು ಹೇಳಿದನು (ಪ್ರಕಟನೆ 1:18).

ಪ್ರಥಮ ಸುವಾರ್ತಾ ಪ್ರಸಂಗದೊಂದಿಗೆ ಪ್ರಾರಂಭಿಸಿ (ಅಪೊಸ್ತಲರ ಕೃತ್ಯ 2) ಪುನರುತ್ಥಾನವು ಅಪೊಸ್ತಲಿಕ ಪ್ರಸಂಗಿಸುವಿಕೆಯಲ್ಲಿ ಪ್ರಮುಖ ಸ್ಥಾನ ಪಡೆಯಿತು. ಈ ಸಂದೇಶದ ಮೇಲೆ ಸಭೆಯು ಸ್ಥಾಪಿಸಲ್ಪಟ್ಟಿತು. ಇದು ಸತ್ಯವೋ ಇಲ್ಲವೇ ಸಭೆಯು ಸುಳ್ಳಿನ ಮೇಲೆ ಕಟ್ಟಲ್ಪಟ್ಟಿದೆಯೋ?

ಪುನರುತ್ಥಾನವು ಅಪೊಸ್ತಲರಿಗೆ ಹೊಸ ಬಲ ಕೊಟ್ಟಿತು. ಅದರ ನವೀಕೃತ ನಿರೀಕ್ಷೆ ಮತ್ತು ಅವರ ಅದ್ಭುತಕರವಾದ ಯಶಸ್ಸು ಬೇರೆ ಯಾವುದೇ ರೀತಿಯಲ್ಲಿ ವಿವರಿಸಲ್ಪಟ್ಟಿಲ್ಲ. ಅವರು ನೋಡಿದ್ದು ನಿಜವಾದದ್ದಾಗಿತ್ತು. ಕ್ರಿಸ್ತನನ್ನು ಪ್ರಸಂಗಿಸುವುದು ಸತ್ತವರೊಳಗಿಂದ ಎಬ್ಬಿಸಲ್ಪಟ್ಟ ಕ್ರಿಸ್ತನನ್ನು ಪ್ರಸಂಗಿಸುವುದಾಗಿದೆ.

## ಆತನ ರಾಜ್ಯ

ಕ್ರಿಸ್ತನ ಬಗ್ಗೆ ಬೋಧಿಸುವುದು ರಾಜ್ಯದ ಬಗ್ಗೆ, ಇಲ್ಲವೇ ಸಭೆಯ ಬಗ್ಗೆ ಬೋಧಿಸುವದನ್ನು ಒಳಗೊಂಡಿದೆ (ಅಪೊಸ್ತಲರ ಕೃತ್ಯ 8:5, 12). ಕ್ರಿಸ್ತನು ಶಿರಸ್ಸು ಹಾಗೂ ಸಭೆಯು ಆತನ ದೇಹ (ಎಫೆಸ 1:22, 23). ಸಂಧಾನವು ದೇಹದಲ್ಲಿರುವುದು (ಎಫೆಸ 2:16). ಸಭೆಯನ್ನು ಬಿಟ್ಟು ಕ್ರಿಸ್ತನನ್ನು ಪ್ರಸಂಗಿಸಲಾರೆವು. ಕ್ರಿಸ್ತನನ್ನು ಪ್ರಸಂಗಿಸುವದರಲ್ಲಿ, ಫಿಲಿಪ್ಪನು ದೇವರ ರಾಜ್ಯವನ್ನು ಕುರಿತು ಪ್ರಸಂಗಿಸಿದನು.

## ಆತನ ಆಜ್ಞೆಗಳು

ಕ್ರಿಸ್ತನನ್ನು ಪ್ರಸಂಗಿಸಲು ಬಯಸುವವನು ಆತನ ಆಜ್ಞೆಗಳನ್ನು ಪ್ರಸಂಗಿಸಬೇಕು. ಕ್ರಿಸ್ತನ ಬೋಧನೆಗಳು ಅಲಕ್ಷಿಸಲ್ಪಡುವಾಗ ಆತನು ಪ್ರಸಂಗಿಸಲ್ಪಡಲಾರನು. ಐಥಿಯೋಪ್ಯದ ಕಂಚುಕಿಗೆ ಫಿಲಿಪ್ಪನು ಕ್ರಿಸ್ತನನ್ನು ಪ್ರಸಂಗಿಸಿದಾಗ, ಅವನು ಬಾಪ್ತಿಸ್ಮ ಹೊಂದುವಂತೆ ಬಯಸಲು ನಡಿಸಿದನು (ಅಪೊಸ್ತಲರ ಕೃತ್ಯ 8:35, 36). ಬಾಪ್ತಿಸ್ಮವನ್ನು ಬಿಟ್ಟು ನಾವು ಕ್ರಿಸ್ತನನ್ನು ಪ್ರಸಂಗಿಸಲಾರೆವು. ಅದು ಆತನ ಆಜ್ಞೆಗಳಲ್ಲಿ ಒಂದಾಗಿದೆ.

## ಆತನ ಎರಡನೆಯ ಬರೋಣ

ತಾನು ಪುನಃ ಬರುವೆನೆಂದು ಯೇಸುವು ಬೋಧಿಸಿದನು (ಯೋಹನ 14:1-3). ಬಿಳಿ ವಸ್ತ್ರಧಾರಿಗಳು (ದೇವದೂತರು) ಯೇಸುವಿನ ಪುನಃ ಬರುವಿಕೆಯ ಬಗ್ಗೆ ಅಪೊಸ್ತಲರಿಗೆ ಭರವಸೆಕೊಟ್ಟರು (ಅಪೊಸ್ತಲರ ಕೃತ್ಯ 1:11). ಇಬ್ರಿಯರಿಗೆ ಬರೆದ ಪತ್ರಿಕೆಯ ಬರಹಗಾರನು ಅದೇ ಸಂಗತಿಯನ್ನು ಘೋಷಿಸಿದನು (ಇಬ್ರಿಯ 9:28). ಇತರ ಪ್ರೇರಿತ ಬರಹಗಾರರಿಂದ ಅದು ಪುನಃ ಪುನಃ ಹೇಳಲ್ಪಟ್ಟಿತು: ಕ್ರಿಸ್ತನನ್ನು ಪ್ರಸಂಗಿಸುವುದು ಅಂದರೆ ಆತನ ಎರಡನೆಯ ಬರೋಣವನ್ನು ಪ್ರಸಂಗಿಸುವುದಾಗಿದೆ.

## ಮುಕ್ತಾಯ

ಯೇಸುವಿನ ಬಗ್ಗೆ ಮಹಾ ಸತ್ಯಗಳು ಮತ್ತು ಆತನ ಸುವಾರ್ತೆಯು ಇಂದು ಅನೇಕರಿಂದ ಅಲ್ಲಗಳೆಯಲ್ಪಟ್ಟಿವೆ. ಯೇಸುವಿನ ಬಗ್ಗೆ ವಿನಯವಾದ, ಪರಿಣಾಮವಾಗದ ಸಂಗತಿಗಳನ್ನು ಹೇಳಲು ಬಯಸುತ್ತಾರೆ; ಆತನ ನೀತಿ ಶಾಸ್ತ್ರವು ಸಮಾಜದ ಕೆಡಕು ಗಳನ್ನು ವಾಸಿಮಾಡುವುದು ಎಂದು ಸ್ವೀಕರಿಸಲು ಬಯಸುತ್ತಾರೆ. ಅದೇ ಸಮಯದಲ್ಲಿ, ಕ್ರಿಸ್ತನನ್ನು ಪ್ರಸಂಗಿಸುವದರಲ್ಲಿ ಘೋಷಿಸಬೇಕಾದ ಘಟನೆಗಳನ್ನೇ ಅವರು ಅಲ್ಲಗಳೆ ಯುತ್ತಾರೆ, ಕ್ರಿಸ್ತನು ಕೆಲವರಿಗೆ ಹುಚ್ಚು ಮಾತಾಗಿದ್ದಾನೆ ಮತ್ತು ಇತರರಿಗೆ ಎಡಹುವ ಬಂಡೆಯಾಗಿದ್ದಾನೆ (1 ಕೊರಿಂಥ 1:18; 1 ಪೇತ್ರ 2:7, 8).

"ಕ್ರಿಸ್ತನ ಬಗ್ಗೆ ನೀವು ಏನನ್ನು ನೆನಸುತ್ತೀರಿ ... ?" (ಮತ್ತಾಯ 22:42).

© 2009 Truth for Today